ಆ) ಈ ಪ್ರದೇಶಗಳಲ್ಲಿ ನೀರಾವರಿ ಪ್ರಕಟಣೆಯಂತೆ ಅರೆ ನೀರಾವರಿ ಬದಲು ಭತ್ತ ಮತ್ತು ಕಬ್ಬು ಬೆಳೆಯುತ್ತಿರುವ ಅಚ್ಚುಕಟ್ಟಿಗೆ ನೀರಾವರಿ ಕಾಯಿದೆ ಪ್ರಕಾರ ಹೆಚ್ಚು ತೆರಿಗೆ (ದಂಡ) ವಿಧಿಸಲಾಗುತ್ತಿದೆ.

ಇ) ಇಲ್ಲ

ಬಾಲ್ಕಿ ತಾಲ್ಲೂಕಿನ ಸಿಂದಿಕಾಮಳ್ ಗ್ರಾಮದಲ್ಲಿ ಬ್ರಿಡ್ಜ್ - ಕಂ- ಬ್ಯಾರೇಜ್ ನಿರ್ಮಾಣ.

1444 (1954) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಮಹಾರಾಷ್ಟ್ರ ರಾಜ್ಯದ ಗಡಿಭಾಗದಲ್ಲಿ ಬರುತ್ತಿರುವ ಭಾಲ್ಕಿ ತಾಲ್ಲೂಕಿನ ಸಿಂದಿಕಾಮಳ್ ಗ್ರಾಮದಲ್ಲಿ ಹಾಗೂ ಇದೇ ತಾಲ್ಲೂಕಿನ ಲಖಿನ್‌ಗಾಂವ್ ಮತ್ತು ಸೋನಾಳ್ ಹೊರಂಡಿ ಗ್ರಾಮದ ಮಧ್ಯದಲ್ಲಿ ಬ್ರಿಡ್ಜ್- ಕಂ-ಬ್ಯಾರೇಜ್ ಗಳಿಲ್ಲದಿರುವುದರಿಂದ ಈ ಭಾಗದ ರೈತರುಗಳಿಗೆ ತೊಂದರೆಯಾಗಿರುವುದು ನಿಜವಲ್ಲವೇ:

ಆ) ಹಾಗಿದ್ದಲ್ಲಿ ಈ ಗ್ರಾಮದಲ್ಲಿ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ ಮಾಡಲು ಹಣಕಾಸಿನ ನೆರವನ್ನು ನೀಡಲು ಮಹಾರಾಷ್ಟ್ರ ಸರ್ಕಾರವು ಮುಂದೆ ಬಂದಿರುವುದು ನಿಜವಲ್ಲವೇ:

ಇ) ಹಾಗಿದ್ದಲ್ಲಿ ಸರ್ಕಾರ ಈ ಭಾಗದ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಂಧಿ ಕಾಮತ್ ಗ್ರಾಮ ಹಾಗೂ ಲಖಿನ್ ಗಾಂವ್ ಸೋನಾಳ ಹೊರಂಡಿ ಗ್ರಾಮಗಳಲ್ಲಿ ಬ್ರಿಡ್ಜ್-ಕಂ-ಬ್ಯಾರೇಜನ್ನು ನಿರ್ಮಿಸುವ ಕಾಮಗಾರಿಯನ್ನು ಈ ವರ್ಷದಲ್ಲಿ ತೆಗೆದುಕೊಳ್ಳಲಾಗುವುದೆ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಆ) ಹೌದು.

ಆ) ಸಿಂಧಿಕಾಮಳ್ ಬ್ರಿಡ್ಜ್-ಕಂ-ಬ್ಯಾರೇಜ್ ಮಹಾರಾಷ್ಟ್ರ ಸರ್ಕಾರವೇ ನಿರ್ಮಿಸುವುದು ಲಖಿನಗಾಂವ್ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿಯನ್ನು ಕರ್ನಾಟಕ ಸರ್ಕಾರ ಕೂಡಿ ನಿರ್ಮಿಸುವುದು, ಮಹಾರಾಷ್ಟ್ರ ಸರ್ಕಾರ ಲಖಿನ್‌ಗಾಂವ್ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಿಸಲು ಅವರ ಭಾಗದ ನೀರಾವರಿಯಾಗುವ ಕ್ಷೇತ್ರದ ಪ್ರಮಾಣ ಮೇಲೆ ಹಣಕಾಸಿನ ನೆರವು ನೀಡುವ ನಿರ್ಧಾರ ಆಗಿದೆ.

ಇ) ಸಿಂಧಿಕಾಮತ್ ಹತ್ತಿರ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿಯನ್ನು ಮಹಾರಾಷ್ಟ್ರ ಸರ್ಕಾರದ ವತಿಯಿಂದ ಕೈಗೊಳ್ಳಲಾಗುತ್ತಿದೆ. ಲಖಿನ್‌ಗಾಂವ್ ಹತ್ತಿರ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿಯು ತಾಂತ್ರಿಕವಾಗಿ ಅನುಮೋದಿತವಾದ ನಂತರದಲ್ಲಿ ಆರ್ಥಿಕ ಲಭ್ಯತೆಯನ್ನು ಪರಿಗಣಿಸಿ ಕ್ರಮಕೈಗೊಳ್ಳ ಲಾಗುವುದು.

ಬೀದರ್ ಜಿಲ್ಲೆಯಲ್ಲಿರತಕ್ಕ ಚಿಕ್ಕ ಮತ್ತು ದೊಡ್ಡ ಕೈಗಾರಿಕೆಗಳು

1445 (1955) Sri. Prakash Khandre(Balki) : Will the Large & Medium Scale and Tnfrastructure Minister. be Pleased to State?